C.C. No.- 3256/2021
CW-1 / PW-1

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ.**

<u>ಸಾಕ್ಷಿಯನ್ನು ದಿನಾಂಕ- **24.07.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>.

| | |
|---|---|
| ಸಾಕ್ಷಿದಾರರ ಹೆಸರು- | ಯಮುನಪ್ಪ |
| ತಂದೆ / ಗಂಡನ ಹೆಸರು- | ಹೊಳೆಯಪ್ಪ ಬಡಿಗೇರ |
| ವಯಸ್ಸು- | 43 ವರ್ಷಗಳು |
| ಉದ್ಯೋಗ- | ಒಕ್ಕಲುತನ |
| ವಾಸಸ್ಥಳ- | ಲಾಯದಹುಣಸಿ |

**<u>ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ</u>-**

ನನಗೆ ಚಾಸಾ-2, 3 ಮತ್ತು 6 ಗೊತ್ತು. ಚಾಸಾ-7 ನನ್ನ ಹೆಂಡತಿ, ಚಾಸಾ-8 ನನ್ನ ಅಕ್ಕ. ಚಾಸಾ-9 ನನ್ನ ಸಂಬಂಧಿಕ. ಚಾಸಾ-10 ಮತ್ತು 11 ನಮ್ಮ ಊರಿನವರು. ಆರೋಪಿ ಗೊತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

2. ದಿಃ 18.05.2021 ರಂದು ನಾನು ಮುಂಜಾನೆ 6 ಗಂಟೆಗೆ ಹೊಲಕ್ಕೆ ಹೋಗಿದ್ದು, ವಾಪಸ್ಸು 10 ಗಂಟೆಗೆ ಮನೆಗೆ ಊಟಕ್ಕೆ ಬಂದಿರುತ್ತೇನೆ. ನಂತರ ಊಟ ಮಾಡಿ 10.30 ರ ಸುಮಾರಿಗೆ ಮನೆಗೆ ಕೀಲಿ ಹಾಕಿ, ಕೀಲಿ ಕೈಯನ್ನು ನನ್ನ ಬಳಿ ಇಟ್ಟುಕೊಂಡು ನಮ್ಮ ಹೊಲಕ್ಕೆ ಹೋಗಿರುತ್ತೇನೆ. ನಂತರ 11.45 ಗಂಟೆಗೆ ಕರೆಂಟ್ ಹೋದ ಕಾರಣ ಹೊಲದಲ್ಲಿ ಕೆಲಸವಿಲ್ಲದ್ದರಿಂದ ನಾನು ವಾಪಸ್ಸು ಮನೆಯ ಹತ್ತಿರ ಬಂದು ಹೊರಗೆ ಕೈಕಾಲು ಮುಖ ತೊಳೆದು ಮನೆಯ ಕಡೆ ಹೋಗಿ ನೋಡಲಾಗಿ ಮನೆಯ ಬಾಗಿಲಿಗೆ ಹಾಕಿದ್ದ ಕೀಲಿ ಪತ್ತಾ ಕಾಣಿಸಲಿಲ್ಲ. ಚಿಲಕ ಕೂಡ ಹಾಕಿದ

ಹಾಗೇ ಇದ್ದು, ಬಾಗಿಲನ್ನು ತೆರೆದು ಒಳಗೆ ಹೋಗಿ ನೋಡಿದಾಗ, ಮನೆಯ ಹಾಲಿನಲ್ಲಿರುವ ಅಲಮಾರದ ಬಾಗಿಲು ಸ್ವಲ್ಪ ತೆರೆದಿತ್ತು, ಅಲ್ಲಿ ಅಲಮಾರಿಯಲ್ಲಿದ್ದ ಬಟ್ಟೆ ಬರೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಂತರ ನಾನು ಅಲಮಾರಿ ನೋಡಲಾಗಿ, ಅದರ ಸೇಫ್ ಲಾಕರನ್ನು ಮೀಟಿ ಅದರಲ್ಲಿದ್ದ 40 ಸಾವಿರ ರೂಗಳು ಕಾಣಲಿಲ್ಲ. ನಂತರ ಅಡುಗೆ ಮನೆಯಲ್ಲಿ ಸೆಲ್ಫ ಮೇಲೆ ಇಟ್ಟಿದ್ದ ಸೂಟಕೇಸ ನೆಲಕ್ಕೆ ಬಿದ್ದು ಚೆಲ್ಲಾಪಿಲ್ಲ ಆಗಿದ್ದು, ಅದರೊಳಗೆ ಇಟ್ಟಿದ್ದ ಅರ್ಧ ತೊಲೆಯ ಬಂಗಾರದ ಬೋರುಮಾಳ, ಅರ್ಧ ತೊಲೆಯ ಬಂಗಾರದ ಕಟಾಣಿ (ಸರ), ಒಂದು ತೊಲೆ ತೂಕದ ಎರಡು ಜೊತೆ ಬಂಗಾರದ ಬುಗರಿ ಕಡ್ಡಿಗಳು ಹಾಗೂ 30 ತೊಲೆ ತೂಕದ ಮೂರು ಜೊತೆ ಬೆಳ್ಳಿ ಕಾಲುಚೈನುಗಳನ್ನು ಯಾರೋ ತೆಗೆದುಕೊಂಡು ಹೋಗಿದ್ದು ಕಂಡು ಬಂತು. ನಂತರ ನಾನು ಗಾಬರಿಗೊಂಡು ಸದರಿ ವಿಷಯವನ್ನು ಚಾಸಾ-8 ರವರಿಗೆ ತಿಳಿಸಿದೆನು. ಅವರು ಹಾಗೂ ಊರಿನವರು ನಮ್ಮ ಮನೆಗೆ ಬಂದರು.

3. ಅವರು ಎಲ್ಲರೂ ನಮ್ಮ ಮನೆಯನ್ನು ನೋಡಿ ದೂರನ್ನು ಕೊಡುವಂತೆ ತಿಳಿಸಿದರು. ನಂತರ ನಾನು 19.05.2021 ರಂದು ಪೊಲೀಸ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ನಂತರ ಪೊಲೀಸರು ನಮ್ಮ ಮನೆಗೆ ಅದೇ ದಿನ ಸಂಜೆ ಬಂದಿದ್ದು, ನಾನು ತೋರಿಸಿದ ಸ್ಥಳವನ್ನು ಪರಿಶೀಲಿಸಿ ಚಾಸಾ-2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳವನ್ನು ಪರಿಶೀಲನೆ ಮಾಡಿ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು

ನೋಡಿ ಗುರುತಿಸಿದ್ದರಿಂದ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಒಂದು ತಿಂಗಳು ಬಿಟ್ಟು ಪೊಲೀಸರು ನನಗೆ ಫೋನು ಮಾಡಿ ಕಳ್ಳ ಸಿಕ್ಕಿರುತ್ತಾನೆ ಠಾಣೆಗೆ ಬಾ ಅಂತಾ ತಿಳಿಸಿರುತ್ತಾರೆ, ನಾನು ಪೊಲೀಸ ಠಾಣೆಗೆ ಹೋಗಿದ್ದು ಆಗ ಪೊಲೀಸರು ನಮ್ಮ ಮನೆ ಕಳ್ಳತನ ಮಾಡಿದ ವ್ಯಕ್ತಿ ಅಜೀತ ಪಾಷಾ ಅಂತಾ ನನಗೆ ತೋರಿಸಿದರು ಹಾಗೂ ನಾವು ಆರೋಪಿ ಕಳ್ಳತನ ಮಾಡಿದ ಬಂಗಾರವನ್ನು ವಶಪಡಿಸಿಕೊಂಡಿರುತ್ತೇವೆ ಅಂತಾ ತಿಳಿಸಿದರು. ನಂತರ ನನ್ನ ಮುಂದೆ ಆರೋಪಿತನು ನಮ್ಮ ಮನೆ ಕಳ್ಳತನ ಮಾಡಿರುವ ಬಗ್ಗೆ ವಿಚಾರಿಸಿದರು. ಆರೋಪಿ ಕಳ್ಳತನ ಮಾಡಿರುವ ಬಗ್ಗೆ ಒಪ್ಪಿಕೊಂಡನು. ಆ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಪುನಃ ಹೇಳಿಕೆ ಪಡೆದುಕೊಂಡಿರುತ್ತಾರೆ.

4. ನಂತರ ಮೂರು ತಿಂಗಳು ಬಿಟ್ಟು ನಾನು ಪೊಲೀಸರು ಜಪ್ತಿಪಡಿಸಿಕೊಂಡ ಬಂಗಾರವನ್ನು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಪೊಲೀಸ ಠಾಣೆಯಿಂದ ಪಂಚನಾಮೆ ಮಾಡಿ, ಫೋಟೋ ತೆಗೆಸಿ ಬಿಡುಗಡೆ ಮಾಡಿಕೊಂಡಿರುತ್ತೇನೆ. ಸಾಕ್ಷಿ ಜಪ್ತಿಪಡಿಸಿಕೊಂಡ ಬಂಗಾರ ಬಿಡುಗಡೆ ಮಾಡುವ ಸಮಯದಲ್ಲಿ ಮಾಡಿದ ಜಪ್ತಿ ಪಂಚನಾಮೆ ಹಾಗೂ ಮುಚ್ಚಳಿಕೆ ಪತ್ರದಲ್ಲಿರುವ ತನ್ನ ಸಹಿಯಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- ಆರೋಪಿ ಪರ ವಕೀಲರಿಂದ</u>**-

5. ನಮ್ಮ ಮನೆಯ ಅಕ್ಕ ಪಕ್ಕ ಮನೆ ಇದ್ದು, ನಮ್ಮ ಮನೆ ಕೊನೆಯ ಮನೆ ಇದ್ದು, ನಂತರ ಹೊಲ ಇರುತ್ತದೆ. ನಮ್ಮ ಮನೆ ಹತ್ತಿರ ಯಮುನಪ್ಪ, ಯಮುನವ್ವ, ರಾಮಪ್ಪ ಹಾಗೂ ಇತರರ 8-10 ಮನೆಗಳು ಇರುತ್ತವೆ. ನಮ್ಮ ಮನೆಗೆ ಹೋಗಲು ಒಂದೇ ರಸ್ತೆ ಇರುತ್ತದೆ. ದೂರನ್ನು ನಾನು ಹೇಳಿ ಮಲ್ಲಿಕಾರ್ಜುನ ಮುಖಾಂತರ ಪೊಲೀಸ ಠಾಣೆಯಲ್ಲಿ ಬರೆಯಿಸಿರುತ್ತೇನೆ. ಮನೆಯಲ್ಲಿ ಏನು ಏನು ಆಗಿತ್ತು ಅಂತಾ ಟಿಪ್ಪಣಿ ಬರೆದುಕೊಂಡು ಹೋಗಿಲ್ಲ. ಸಾಕ್ಷಿ ಮುಂದುವರೆದು ನಾನು ನೋಡಿದಾಗ ನೆನಪಿದ್ದು, ಆ ಸಂಗತಿಯನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಪೊಲೀಸರಿಗೆ ದೂರಿನ ಜೊತೆ ಕಳ್ಳತನವಾದ ವಸ್ತುಗಳ ಬಗ್ಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾನು ಕಳ್ಳತನವಾದ ವಸ್ತುಗಳಿಗೆ ಯಾವುದೇ ಕಿಮ್ಮತ್ತು ಮಾಡಿಲ್ಲ ಎಂದರೆ ನಿಜ. ನಾನು ದೂರಿನಲ್ಲಿ ಕಳ್ಳತನವಾದ ವಸ್ತುಗಳ ಮಾಡಲ್ ಬಗ್ಗೆ ಹೇಳಿಲ್ಲ ಎಂದರೆ ನಿಜ. ನಮ್ಮ ಮನೆಯ ಬೀಗ ಯಾವ ಕಂಪನಿಯದು ಅಂತಾ ನನಗೆ ಗೊತ್ತಿಲ್ಲ. ನಮ್ಮ ಮನೆಯ ಬಾಗಿಲು ಎರಡು ಪಡಕಿನ ಬಾಗಿಲು ಆಗಿರುತ್ತದೆ. ನಮ್ಮ ಮನೆಯ ಮುಖ್ಯ ದ್ವಾರದ ಹತ್ತಿರ ನಿಂತು ನೋಡಿದರೆ ರಸ್ತೆಯಲ್ಲಿ ಹೋಗಿ ಬರುವವರು ಕಾಣುತ್ತಾರೆ ಎಂದರೆ ಸರಿ. ನಮ್ಮ ಊರಿನಲ್ಲಿ 350 ರಿಂದ 400 ಮನೆಗಳು ಇವೆ. ನಮ್ಮ ಊರಿನವರು ಯಾರು ನನಗೆ ನಮ್ಮ ಮನೆ ಕಳ್ಳತನ ಆಗಿರುವ ಬಗ್ಗೆ ತಿಳಿಸಿಲ್ಲ. ಮನೆಯ ಕೀಲಿಯ ಕೈಯನ್ನು ನನ್ನ ಬಳಿ ಇಟ್ಟುಕೊಂಡು ಹೋಗಿದ್ದೆ. ನಾನು ಹೋಗಿ ನೋಡಿದಾಗ ಮನೆಯ ಕೀಲಿಯನ್ನು ಮುರಿದಿದ್ದರು. ನನ್ನ ಮನೆಯ ಬಾಗಿಲು ಇತ್ತಿಚಿಗೆ ಬಂದ ಬಾಗಿಲು ಆಗಿರುತ್ತದೆ. ನನ್ನ ಮನೆಯ ಬಾಗಿಲಿಗೆ ಒಂದು ಕಡೆಗೆ ಹಾನಿ ಆಗಿತ್ತು. ಮುರಿದ ಬೀಗವನ್ನು ಪೊಲೀಸರು ತೆಗೆದುಕೊಂಡ

ಬಗ್ಗೆ ಆ ದಿನ ನಾನು ಗಾಬರಿಯಲ್ಲಿ ಇರುವುದರಿಂದ ನಾನು ನೋಡಿಲ್ಲ. ನನ್ನ ಮನೆಯಲ್ಲಿ ಮೂರು ಭಾಗಗಳು ಇವೆ. ನಾನು ಬ್ಯಾಂಕಿನಲ್ಲಿ ಯಾವುದೇ ಸೇಫ್ ಲಾಕರ್ ಇಟ್ಟುಕೊಂಡಿಲ್ಲ. ಅಲಮಾರನ್ನು ನನ್ನ ಮನೆಯಲ್ಲಿ ಪೂರ್ವ ದಿಕ್ಕಿಗೆ ಮುಖ ಮಾಡಿ ಇಟ್ಟಿದ್ದೆ. ನಾನು ಮನೆಯಲ್ಲಿ ನಾಯಿಯನ್ನು ಸಾಕಿರುವುದಿಲ್ಲ. ಆ ದಿನ ದನಗಳು ಹೊಲಕ್ಕೆ ಹೋಗಿದ್ದವು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ವಯಸ್ಸಾದವರು ಯಾರು ಇರಲಿಲ್ಲ. ನಮ್ಮ ತಂದೆ ತಾಯಿ ಹೊಲಕ್ಕೆ ಹೋಗಿದ್ದರು. ನಮ್ಮ ಮನೆಯಲ್ಲಿ ದೂರು ಕೊಡುವ ಸಮಯದಲ್ಲಿ ಯಾವುದೇ ಮಕ್ಕಳು ಇರಲಿಲ್ಲ. ನಾನು ಬೆಳೆ ಮಾರಾಟ ಮಾಡಿ ಬಂದ 40 ಸಾವಿರ ರೂ. ಹಣವನ್ನು ಮನೆಯಲ್ಲಿ ಇಟ್ಟದ್ದೆ. ನಾನು ಮನೆಯಲ್ಲಿ 40 ಸಾವಿರ ರೂ. ಹಣ ಇಟ್ಟ ಬಗ್ಗೆ ಪೊಲೀಸರಿಗೆ ಯಾವುದೇ ರಶೀದಿಯನ್ನು ಕೊಟ್ಟಿಲ್ಲ. ಅಲಮಾರಿನ ಕೀಲಿಯನ್ನು ಮನೆಯಲ್ಲಿ ಇಟ್ಟಿದ್ದೆ. ಅಲಮಾರಾ ಯಾವ ಕಂಪನಿಯದು ಎಂದು ಗೊತ್ತಿಲ್ಲ. ಅಲಮಾರಿನಲ್ಲಿ ಒಟ್ಟು ಮೂರು ಖಾನೆಗಳು ಇವೆ. ಕಳ್ಳತನವಾದ ಹಣವನ್ನು ಅಲಮಾರಿನ ಮೂರನೇ ಪೆಟ್ಟಿಗೆಯಲ್ಲಿ ಇಟ್ಟಿದ್ದೆ. ಅದನ್ನು ತೆಗೆಯಲು ಎರಡು ಕೀಲಿ ತೆಗೆಯಿಬೇಕು. ಅಲಮಾರಿನ ಎರಡು ಬಾಗಿಲು ಹತ್ತಿರ ಹಾನಿಯಾಗಿತ್ತು. ಪೊಲೀಸರು ಅಲಮಾರಿಯ ಚಾವಿಗಳನ್ನು ತೆಗೆದುಕೊಂಡಿಲ್ಲ. ನನಗೆ ಯಾರ ಮೇಲೆಯೂ ಅನುಮಾನ ಇಲ್ಲ. ನನಗೆ ಆರೋಪಿಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ಪೊಲೀಸರು ನಾನು ದೂರು ಕೊಟ್ಟ ಮೇಲೆ ನಾನು ಹೇಳಿದ ಮಾಹಿತಿಯನ್ನು ಬರೆದುಕೊಂಡಿರುತ್ತಾರೆ. ಅವುಗಳನ್ನು ನಾನು ತೆಗೆದುಕೊಂಡು ಓದಿಲ್ಲ. ಪಂಚನಾಮೆ ಮಾಡಲು ಪೊಲೀಸರು 4-5 ಜನ ಶ್ವಾನದಳದೊಂದಿಗೆ ಬಂದಿದ್ದರು. ಪೊಲೀಸರು ಮನೆಗೆ ಬಂದಾಗ ಒಂದು ದಾಖಲೆ ಬರೆದಿರುತ್ತಾರೆ. ನಾನು ಪೊಲೀಸ ಠಾಣೆಗೆ ಮೂರು ಸಾರಿ ಹೋಗಿರುತ್ತೇನೆ. ನನಗೆ ಪೊಲೀಸರು ತನಿಖೆ ಕಾಲದಲ್ಲಿ ಯಾವುದೇ

ನೋಟಿಸನ್ನು ಕೊಟ್ಟಿಲ್ಲ, ಸಾಕ್ಷಿಯು ಮುಂದುವರೆದು ಪೊಲೀಸರು ಫೋನು ಮೂಲಕ ತಿಳಿಸಿದರು ಎಂದು ಉತ್ತರಿಸುತ್ತಾರೆ. ಪೊಲೀಸರು ನನ್ನ ಮನೆಯಲ್ಲಿ ಯಾವುದೇ ಬೆರಳಚ್ಚು ಪರೀಕ್ಷೆಯನ್ನು ಮಾಡಿಲ್ಲ. ನಮ್ಮ ಮನೆಯವರು ಕಳ್ಳತನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಪೊಲೀಸ ಠಾಣೆ 12 ಕಿಮೀ ದೂರವಾಗುತ್ತದೆ. ಚಾಸಾ-2 ಮತ್ತು 3 ನಮ್ಮ ಊರಿನವರು ಎಂದರೆ ಸರಿ. ಅವರಿಗೆ ನನ್ನ ಜೊತೆ ಚೆನ್ನಾಗಿ ಸಂಬಂದ ಇದೆ. ಆರೋಪಿಯನ್ನು ಈ ದಿನ ಪೊಲೀಸರು ನನಗೆ ನ್ಯಾಯಾಲಯದ ಹೊರಗೆ ತೋರಿಸಿರುತ್ತಾರೆ ಎಂದರೆ ಸಾಕ್ಷಿ ಪೊಲೀಸ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಆರೋಪಿಯ ತಂದೆ ಹೆಸರು ಗೊತ್ತಿಲ್ಲ, ಆರೋಪಿಯ ಹೆಸರು ಪೊಲೀಸರು ಹೇಳಿದ ಮೇಲೆ ನನಗೆ ಗೊತ್ತಾಗಿದೆ ಎಂದರೆ ನಿಜ. ಆರೋಪಿ ಪತ್ತೆ ಆದ ದಿನ ಪೊಲೀಸರ ನನ್ನನ್ನು ಮುಂಜಾನೆ ಪೊಲೀಸ ಠಾಣೆಗೆ ಕರೆಸಿದ್ದರು. ಅದಾದ ನಂತರ ನಾನು ಪೊಲೀಸ ಠಾಣೆಗೆ ಹೋಗಿಲ್ಲ. ನಾನು ವೈಯಕ್ತಿಕವಾಗಿ ಪೊಲೀಸರ ಮುಂದೆ ನನ್ನ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಪೊಲೀಸರು ಸಹಿ ಮಾಡು ಅಂತಾ ಹೇಳಿದ ಸ್ದಳದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ನಿಜ. ನಾನು ದಿನಾಂಕ 26.06.2021 ರಂದು ಪೊಲೀಸ ಠಾಣೆಗೆ ಹೋಗಿಲ್ಲ, ಪೊಲೀಸರು ನನಗೆ ಆರೋಪಿಯನ್ನು ತೋರಿಸಿಲ್ಲ, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಅಲಮಾರ ಬಾಗಿಲು ಮುರಿದಿಲ್ಲ ಹಾಗೂ ಸೂಟಕೇಸನಲ್ಲಿಯ ಯಾವುದೇ ವಸ್ತುಗಳು ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಹೊರಗಿನವರು ಬಂದು ನಮ್ಮ ಮನೆಯನ್ನು ಕಳ್ಳತನ ಮಾಡಿಕೊಂಡು ಹೋಗುವ ಪ್ರಸಂಗ ಇಲ್ಲ ಎಂದರೆ ಸರಿಯಲ್ಲ. ನಾನು ಮನೆತನದ ವಿಚಾರವನ್ನು ಮುಚ್ಚಿಟ್ಟು ಪೊಲೀಸರ ಮಾತನ್ನು ಕೇಳಿಕೊಂಡು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊಲೀಸ ಠಾಣೆಯಲ್ಲಿ ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.